## ಸಂಪಿನಲ್ಲಿ ಆಮೆ ಇದ್ಯಾ?

ನೋಡೋಕೆ ಹಳೇ ತೆಂಗಿನ ಚಿಪ್ಪಿನ ತರಹ ಕಾಣಿಸ್ತಿರೋ ಈ ಆಕೃತಿ ನನ್ನ ಮೃತ ಕವಚ. ಅಪಾಯ ಎದುರಾದಾಗ ನಾಲ್ಕು ಕಾಲುಗಳು ಮೋಟು ಬಾಲ ಹಾಗೂ ಶಿರಭಾಗವನ್ನೂ ಇದೇ ರಕ್ಷಾಕವಚದೊಳಗಡೆ ಇರಿಸಿಕೊಂಡು ಬದುಕುವ ನಮ್ಮನ್ನು ಆಮೆಗಳೆಂದು ನೀವು ಕರೆದಿರಿ. ನಿಧಾನಗತಿಗೆ ಹೆಸರಾದ ನಾನು ಹೀಗೆ ನಿಧನಗೊಂಡಿರುವುದು ನೈಸರ್ಗಿಕವಾಗಲ್ಲ. ಬದಲಾಗಿ ಮನುಷ್ಯನ ನಿರ್ಲಕ್ಷ್ಯದಿಂದ.

ಹೌದು, ಯಾರೋ ಹುಲುಮಾನವರು ಕಟ್ಟಿಸಿರೋ ನೀರಿನ ಸಂಪಿನಲ್ಲಿ ಮಳೆಗಾಲದಲ್ಲಿ ನನ್ನನ್ನು ಎತ್ತಿತಂದು ಹಾಕಿದರು. ಒಂದಷ್ಟು ದಿನ ಪಾಚಿ ತಿಂದು ಅರಗಿಸಿಕೊಂಡೆ, ಆನಂತರ ಅದೂ ಇಲ್ಲದಾಯಿತು. ಕೆಲವೇ ತಿಂಗಳುಗಳಲ್ಲಿ ಆಳೆತ್ತರದ ಸಂಪಿನ ನೀರು ತಳಸೇರಿ ಬತ್ತಿಹೋಯಿತು. ನನ್ನನ್ನು ಸಂಪಿಗೆಸೆದವರು ಮೂರುಹೊತ್ತು ತಿಂದುಂಡು ಸೊಂಪಾಗಿದ್ದರು. ಆದರೆ ನಾನು ಬತ್ತಿದ ತೊಟ್ಟಿಯೊಳಗಿನಿಂದ ಮೇಲೆ ಬರಲಾಗದೇ ಹಸಿವು ಬಾಯಾರಿಕೆಯಿಂದ ಕಂಗಾಲಾಗಿ ಆರ್ತನಾದಗೈದೆ. ನನ್ನ ಕೂಗು ಈ ನರಮನುಷ್ಯರಿಗೆ ಹೇಗೆ ಕೇಳಬೇಕು? ಅಷ್ಟೊಂದು ಸೂಕ್ಷ್ಮತೆಯನ್ನು ಅವರಿಂದ ನಿರೀಕ್ಷಿಸುವುದು ಮೂರ್ಖತನವೇ ಸರಿ.




## 1898ರ ‘ಕನ್ನಡ ಮೊದಲನೇ ಪುಸ್ತಕ’

ಈಚೆಗೆ ಅಂಗಡಿಯೊಂದಕ್ಕೆ ಹೋಗಿದ್ದೆ. ಅಂಗಡಿಯ ಹೆಸರು ನಿಕೋಬಾರ್. ವಾಚ್ ರಿಪೇರಿಗೆ ಕೊಂಚ ಸಮಯ ಹಿಡಿದಿದ್ದರಿಂದ ನಾನು ಕಾಯಬೇಕಾಗಿ ಬಂತು. ಅತ್ತಿತ್ತ ಕಣ್ಣು ಹಾಯಿಸಿದಾಗ ಅಂಗಡಿಯಲ್ಲಿನ ಕೆಲ ಪುಸ್ತಕಗಳು ನನ್ನ ಕಣ್ಣಿಗೆ ಬಿದ್ದವು. ಆ ಪುಸ್ತಕಗಳ ಕುರಿತು ಅಂಗಡಿಯ ಮಾಲೀಕ ಕೆ. ವೆಂಕಟೇಶ್ ಅವರನ್ನು ವಿಚಾರಿಸಿದಾಗ ಪುಸ್ತಕಗಳ ಕುರಿತು ಕುತೂಹಲಕಾರಿ ಮಾಹಿತಿಯು ತಿಳಿಯಿತು.

ಅವರಲ್ಲಿದ್ದ ಪುಸ್ತಕಗಳ ಪೈಕಿ ಒಂದು ಪುಸ್ತಕ ಬರೆಯಲು ರಾಗಿ ಹಿಟ್ಟನ್ನು ಬಳಸಲಾಗಿತ್ತು. ಒಂದು ಬಾರಿ ಬರೆಯಲು ಕೈ ಇಟ್ಟರೆ, ವಾಕ್ಯ ಮುಗಿಯುವವರೆಗೂ ಕೈ ಎತ್ತುವಂತಿರಲಿಲ್ಲ. ಅದೇ ಆ ಪುಸ್ತಕದ ಸ್ಪೆಷಾಲಿಟಿಯಾಗಿತ್ತಂತೆ ಅನ್ನೋ ವಿಚಾರಗಳು ಗಮನಸೆಳೆದವು. ಜೊತೆಗೆ 1898ರ ಕನ್ನಡ ಮೊದಲನೇ ಪುಸ್ತಕ ನೀವೆಲ್ಲಾದರೂ ಕಂಡಿದ್ದೀರಾ ಎಂದು ಪ್ರಶ್ನಿಸಿತ್ತು. ಅದನ್ನು ಅವರು ನನಗೆ ತೋರಿಸಿದರು. ಈ ಪುಸ್ತಕದ ಕರ್ತೃ ಇ. ಮಾರ್ಸಡೆನ್. ಈ ಪುಸ್ತಕವು ತುಂಬಾ ಹಳೆಯದಾಗಿದ್ದು, ಕೆಲ ಹಾಳೆಗಳು ಹಾಳಾಗಿವೆ. ಈ ಪುಸ್ತಕದಲ್ಲಿ ಹಸು, ಕುದುರೆ, ನಾಯಿ, ಬೆಕ್ಕು ಹೀಗೆ ಹಲವು ಪಾಠಗಳ ಸರಣಿಯನ್ನು ಕಾಣಬಹುದು.

—ದೀಪಶ್ರೀ ಎಸ್. ಕೂಡ್ಲಿಗಿ



MACMILLAN'S SERIES OF TEXT-BOOKS FOR INDIAN SCHOOLS.

CANARESE FIRST READER

BY

E. MARSDEN, B. A.

Inspector of Schools, Central Circle.

SECOND EDITION.

ಕನ್ನಡ ಮೊದಲನೇ ಪುಸ್ತಕ

ಇದು

ಇ. ಮಾರ್ಸ್‌ಡೆನ್, ಬಿ. ಎ.,

[illegible]

ಎರಡನೇ ಛಾಪೆ.

MACMILLAN & Co.,

LONDON, BOMBAY AND CALCUTTA.

SOLD BY THE

BASEL MISSION BOOK & TRACT DEPOSITORY, MANGALORE.



## ಒಣ ತೆಂಗಿನಕಾಯಿ ಸುಲಿದು ತಿನ್ನುವ ಕಾಡುಹಂದಿ

ಅಂದಿನ ರಾಜರ ಕಾಲದ ಯುದ್ಧದಲ್ಲಿ ಫಿರಂಗಿಗಳಿಗೆ ಬಳಸಲಾಗುತ್ತಿದ್ದ ‘ಸಿಡಿಗುಂಡು’ ನೆನಪಿಸುತ್ತಿವೆ ಚಿತ್ರದಲ್ಲಿ ಕಾಣುತ್ತಿರುವ ಒಣ ತೆಂಗಿನಕಾಯಿಗಳು. ಇವು ಸಾಮಾನ್ಯ ಆಕಾರದ ತೆಂಗಿನಕಾಯಿಗಳಷ್ಟೆ. ಇವುಗಳ ಸಿಪ್ಪೆಯನ್ನು ಮನುಷ್ಯರಾಗಲೀ ಅಥವಾ ಯಾವುದೇ ಯಂತ್ರಗಳ ಸಹಾಯದಿಂದಾಗಲಿ ತೆಗೆದಿದ್ದಲ್ಲ. ತೋಟದಲ್ಲಿ ಮರದಿಂದ ಒಣಗಿ ಬಿದ್ದ ತೆಂಗಿನಕಾಯಿಗಳನ್ನು ಅಲ್ಲಿಗೆ ರಾತ್ರಿ ಸಮಯದಲ್ಲಿ ಬರುವ ಕಾಡುಹಂದಿಗಳು ಸುಲಿದು ತಿನ್ನಲು ಪ್ರಯತ್ನಿಸಿದ್ದು, ಅವು ಹಂದಿಯ ಬಾಯಿಗೆ ಸಿಕ್ಕು ಕಪ್ಪು ಬಣ್ಣ ಪಡೆದುಕೊಂಡು, ನೋಡುವುದಕ್ಕೆ ಮದ್ದುಗುಂಡು ತರಹ ಕಾಣಿಸುತ್ತಿವೆ.

ಮಲೆನಾಡಿನ ಭಾಗದ ಕಾಡಂಚಿನ ತೋಟಗಳಲ್ಲಿ ಕಾಡುಜೀವಿಗಳ ಕಾಟ ಇದ್ದೇ ಇರುತ್ತದೆ. ಕಾಡುಹಂದಿ ಕಾಟ ಎಲ್ಲಾ ಕಾಲದಲ್ಲೂ ವಿಪರೀತ. ಅವು ಗೆಡ್ಡೆಗೆಣಸು ಹುಡುಕಿ ಬರುವುದು ಸಹಜ. ಆದರೆ, ಇತ್ತೀಚಿನ ವರ್ಷಗಳಲ್ಲಿ ಆಹಾರ ಹುಡುಕಿಕೊಂಡು ಬರುವ ಹಂದಿಗಳು ಸಿಪ್ಪೆಸಹಿತವಾದ ತೆಂಗಿನಕಾಯಿಯನ್ನೂ ಬಿಡದೆ ಹುಡುಕಿ ತಿನ್ನುತ್ತಿರುವುದು ಬೆಳೆಗಾರರಿಗೆ ಚಿಂತೆ ಮೂಡಿಸಿದೆ. ಕಾಡುಹಂದಿಯ ಮೂತಿಗೆ ಇರುವ ಕೋರೆಹಲ್ಲಿನ ಸಹಾಯದಿಂದ ತೆಂಗಿನಕಾಯಿಯ ಕಠಿಣವಾದ ಸಿಪ್ಪೆಯನ್ನು ಕೂಡ ಸುಲಭವಾಗಿಯೇ ಕಿತ್ತು ತಿನ್ನುವುದು ಆಶ್ಚರ್ಯವೇ ಆಗಿದೆ ಎನ್ನುತ್ತಾರೆ ರೈತರು. ಈಗಾಗಲೇ ಮಂಗ, ಕಾಡೆಮ್ಮೆ, ಆನೆ ಮೊದಲಾದ ಕಾಡಿನ ಜೀವಿಗಳ ಕಾಟದಿಂದ ತೊಂದರೆ ಅನುಭವಿಸುವ ಬೆಳೆಗಾರರು, ಈಗ ತೆಂಗಿನಕಾಯಿ ಸುಲಿದು ತಿನ್ನುವ ಕಾಡುಹಂದಿಗಳಿಂದ ತೋಟದಲ್ಲಿ ಒಣಗಿ ಬೀಳುವ ಕಾಯಿಗಳನ್ನು ಹೇಗೆ ಉಳಿಸಿಕೊಳ್ಳುವುದು ಎಂದು ಉಪಾಯ ಹುಡುಕುವಂತಾಗಿದೆ.

—ಅರ್ಚನಾ ಜಿ. ಬೊಮ್ನಳ್ಳಿ